

ಓ... ಅದೊಂದು ದೊಡ್ಡ ಕಥೆ. ಅದನ್ನು ವಿವರಿಸಬೇಕಾದರೆ ನನ್ನ ಬಾಲ್ಯದ ಬಗ್ಗೆ ಹೇಳಬೇಕು. ನಾನು ಹುಟ್ಟಿದ್ದು ಇಟಲಿಯಲ್ಲಿ. ಬಾಲ್ಯದಲ್ಲಿಯೇ ನನಗೆ ಕಲಾತ್ಮಕವಾದ ವಿಚಾರಗಳಲ್ಲಿ ಬಹಳ ಆಸಕ್ತಿಯಿತ್ತು. ಆದ್ದರಿಂದ ಅದಕ್ಕೆ ಸಂಬಂಧಿಸಿದ ಒಂದೆರಡು ತರಗತಿಗಳಿಗೆ, ಕೋರ್ಸ್‌ಗಳಿಗೆ ಸೇರಿಕೊಂಡು ಕಲಿಯುತ್ತಾ ಇದ್ದೆ. ನನ್ನ ಆಸಕ್ತಿಯನ್ನು ಅಮ್ಮ ತುಂಬಾ ಬೆಂಬಲಿಸುತ್ತಿದ್ದರು. ಇಟಲಿಯ ಪ್ರಸಿದ್ಧ ಕಲಾಪ್ರಕಾರ ಬ್ಯಾಲೆ ಕಲಿಯಬೇಕು ಎನ್ನುವ ಆಸೆಯಿತ್ತು. ಆದರೆ, ಬ್ಯಾಲೆ ತರಗತಿಗಳ ಶುಲ್ಕ ತುಂಬಾ ದುಬಾರಿ. ನಮ್ಮದು ಶ್ರೀಮಂತ ಕುಟುಂಬವೇನಲ್ಲ. ವಿದೇಶೀಯರು ಎಂದರೆ ಅವರು ಶ್ರೀಮಂತರೇ ಆಗಿರುತ್ತಾರೆ ಎಂದು ಸಾಮಾನ್ಯವಾಗಿ ಭಾರತದಲ್ಲೊಂದು ತಪ್ಪುಕಲ್ಪನೆಯಿದೆ. ನಾವು ಹಾಗೇನೂ ಹಣವಂತರಲ್ಲ. ನಾವು ಕಷ್ಟಪಟ್ಟು ದುಡಿದು ಜೀವನನಿರ್ವಹಿಸುತ್ತಿದ್ದೆವು. ಆದ್ದರಿಂದ ನಾನು ಬ್ಯಾಲೆಯ ಬದಲು ಇಟಲಿಯಲ್ಲಿ ಜನಪ್ರಿಯವಾಗಿರುವ ಇತರ ಸಮಕಾಲೀನ ನೃತ್ಯಗಳನ್ನು ಕಲಿಸುವ ತರಗತಿ ಸೇರಿದೆ, ರಂಗಭೂಮಿಗೆ ಸಂಬಂಧಿಸಿದ ಕೋರ್ಸ್‌ಗೂ ಸೇರಿದೆ.

ನನ್ನ ಅಮ್ಮನ ಹೆಸರು ನಂದಾ. ಭಾರತೀಯ ಹೆಸರಿನಂತೆಯೇ ಭಾಸವಾಗುತ್ತಿದೆಯಲ್ಲವೇ? ಹೌದು. ನನಗೆ ಬಾಲ್ಯದಿಂದಲೂ ಭಾರತೀಯ ವಿಚಾರಗಳ ಕಡೆಗೆ ಗೊತ್ತಿಲ್ಲದೆಯೇ ಬಹಳ ಆಕರ್ಷಣೆ ಇತ್ತು. ಭಾರತೀಯರು ಮೂಗು ಚುಚ್ಚಿಸಿಕೊಳ್ಳುತ್ತಾರೆ ಎಂದು ತಿಳಿದು ಚಿಕ್ಕಂದಿನಲ್ಲಿಯೇ ಮೂಗು ಚುಚ್ಚಿಸಿಕೊಂಡಿದ್ದೆ. ಈಗ ಇದು ನನ್ನ ನಿತ್ಯ ಆಭರಣವಾಗಿದೆ. ನಮ್ಮ ಕುಟುಂಬದಲ್ಲಿ ನನ್ನೊಬ್ಬಳ ಹೊರತು ಇನ್ಯಾರೂ ಸಸ್ಯಾಹಾರಿಗಳಿಲ್ಲ. ಸಸ್ಯಾಹಾರದ ತಾತ್ವಿಕ ಪರಿಕಲ್ಪನೆಗಳೆಲ್ಲ ಅರ್ಥವಾಗುವ ಮುನ್ನವೇ ನಾನು ಸಸ್ಯಾಹಾರಿಯಾಗಿಬಿಟ್ಟಿದ್ದೆ. ಈಗ ಹಿಂದಿರುಗಿ ನೋಡಿದರೆ ನನಗೇ ಅಚ್ಚರಿಯಾಗುತ್ತದೆ.

ಇಟಲಿಯಲ್ಲಿ ನಾನು ಮೂಗುತಿ ಧರಿಸಿ ಸೀರೆ ಉಟ್ಟು ಓಡಾಡುತ್ತೇನೆ. ಮಿಲಾನ್‌ನಲ್ಲಿ ಭಾರತೀಯ ಸಾಂಸ್ಕೃತಿಕ ಕೇಂದ್ರದಲ್ಲಿ ನಾನು ಸೀರೆ ಉಡುವುದನ್ನು ಕಲಿತೆ. ಆರಂಭದಲ್ಲಿ ಸ್ವಲ್ಪ ಗಲಿಬಿಲಿ ಆಗಿತ್ತು. ನಂತರ ಸೀರೆ ಎಷ್ಟೊಂದು ಆರಾಮದಾಯಕ ದಿರಿಸು ಎಂದು ಅರ್ಥವಾಗತೊಡಗಿತು. ಕಳೆದ ಇಪ್ಪತ್ತೈದು ವರ್ಷಗಳಿಂದ ನಾನು ಸೀರೆ ಉಡುತ್ತಿದ್ದೇನೆ. ಜಗತ್ತಿನಲ್ಲಿ ಮಹಿಳೆಯ ಅತೀ ಸುಂದರ ದಿರಿಸೆಂದರೆ ಅದು ಸೀರೆ. ಚೆನ್ನೈಯಲ್ಲಿ ತುಂಬ ಸೆಕೆ. ಆದ್ದರಿಂದ ಹತ್ತಿಯ ಸೀರೆಯನ್ನೇ ಉಡುತ್ತೇನೆ.

**◆ ಚೆನ್ನೈಯಲ್ಲಿ ನಿಮ್ಮನ್ನು ಭರತನಾಟ್ಯ ಕಲಿತ ವಿದೇಶಿ ಮಹಿಳೆಯೆಂದು ಗುರುತಿಸುತ್ತಾರೆಯೇ?**